ದಿನಾಂಕ. 03-10-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಕರಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ** 3 ನೇ ಎದುರುದಾರರ ಪರ ಶ್ರೀ ಎ ಎನ್ ಟಿ .ವಕೀಲರಿಂದಃ

19. ನಾನು ಲೆಬರ್ ಕ್ವಾಂಟ್ರಾಕ್ಟರ ಅಲ್ಲ ಎಂದರೆ ಸರಿ. ಸಾಕ್ಷಿ ಜನ ಕರೆದುಕೊಂಡು ಹೋಗಿ ಕೆಲಸ ಮಾಡಿಸುತ್ತಿದ್ದೆ ಎಂದು ನುಡಿಯುತ್ತಾರೆ. ರಾಮಚಂದ್ರ ನಾಯಕ್ ರವರು ಮರದ ಕ್ವಾಂಟ್ರಾಕ್ಟರ ಆಗಿದ್ದು, ಅವರ ಹತ್ತಿರ ನಾನು ಜನ ಕರೆದುಕೊಂಡು ಹೋಗುತ್ತಿದ್ದೆ. ಅವರು ಕಾರವಾರ ಸೊಸೈಟಿಯವರಿಂದ ಕ್ವಾಂಟ್ರಾಕ್ಟ ತೆಗೆದುಕೊಂಡು ಕೆಲಸ ಮಾಡುತ್ತಿದ್ದರು. ಸದರಿ ಸೊಸೈಟಿ ಮತ್ತು ರಾಮಚಂದ್ರ ನಾಯಕ್ ರವರ ಮಧ್ಯೆ ಆ ಬಗ್ಗೆ ಕಾಗದ ಪತ್ರ ಆಗುತ್ತಿತ್ತಾ ಎಂದು ನನಗೆ ಗೊತ್ತಿಲ್ಲ. ಒಂದು ಗೆರೆ ಹಾಳೆಯಲ್ಲಿ ಆಳುಗಳು ಬಂದ ಬಗ್ಗೆ ನಮೂದು ಮಾಡಿಕೊಳ್ಳುತ್ತಿದ್ದರು. ಬೇರೆ ಯಾವುದೆ ಕಾಗದ ಪತ್ರ ನಮ್ಮ ಮಧ್ಯೆ ಇರುವುದಿಲ್ಲ. ಅವರು ಆಳುಗಳಿಗೆ ಹಣ ಪಾವತಿಸಿದ ಬಗ್ಗೆ ಒಚರ್ ಪಡೆಯುತ್ತಿರಲಿಲ್ಲ. ಅವರು ಆಳುಗಳಿಗೆ ಹಣ ವಿತರಿಸಲು ನನ್ನ ಬಳಿ ಕೊಡುತ್ತಿದ್ದರು. ಅವರು ಆಳುಗಳಿಗೆ ಹಣ ಕೊಟ್ಟ ಬಗ್ಗೆ ಗೆರೆ ಹಾಳೆಯಲ್ಲಿ ನಮೂದಿಸುತ್ತಿದ್ದರು. ಅಪಘಾತಕ್ಕೆ ಮೊದಲು 5-6 ವರ್ಷದಿಂದ ಆ ರೀತಿ ಕೆಲಸ ನಾನು ಮಾಡಿಸುತ್ತಿದ್ದೆ. ಆ ರೀತಿ ನಮೂದು ಮಾಡಿದ ಗೆರೆ ಹಾಳೆಗಳು ನನ್ನ ಬಳಿ ಇವೇಯಾ ಇಲ್ಲವಾ ಎಂದು ಲಕ್ಷ್ಯ ಇಲ್ಲ. ಸಾಕ್ಷಿ ಸ್ವತಃ ಆಳುಗಳಿಗೆ ಹಣ ಪಾವತಿ ಆಗಿರುವುದರಿಂದ ಅದನ್ನು ಇಟ್ಟುಕೊಳ್ಳಬೇಕು ಎಂದು ನನಗೆ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

20. ನನಗೆ ಆ ರೀತಿ ಆಳುಗಳನ್ನು ಸರಬರಾಜು ಮಾಡುವ ಕೆಲಸದಿಂದ ಎಷ್ಟು ಹಣ ಬರುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ಆದರೆ ನನಗೆ ಹಣ ಬರುತ್ತಿತ್ತು ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ನಾನು

ರಾಮಚಂದ್ರ ನಾಯಕ್ ರವರಿಗೆ ಆಳುಗಳನ್ನು ಸರಬರಾಜು ಮಾಡಿ ಕಮಿಷನ್ ಹಣವನ್ನು ಪಡೆಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಆಳುಗಳಿಗೆ ನೀಡುತ್ತಿದ್ದ ಹಣದಲ್ಲಿ ನನ್ನ ಕಮಿಷನ್ ಇಟ್ಟುಕೊಂಡು ಸಂಬಳ ನೀಡುತ್ತಿದ್ದೆ ಹಾಗೂ ಆ ವಿಚಾರ ರಾಮಚಂದ್ರ ನಾಯಕ್ ರಿಗೆ ಗೊತ್ತಿತ್ತಾ ಎಂದು ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ರಾಮಚಂದ್ರ ನಾಯಕ್ ರವರು ಅರಣ್ಯ ಗುತ್ತಿಗೆದಾರರಲ್ಲ ಎಂದರೆ ಸಾಕ್ಷಿ ಯಾವ ರೀತಿಯಾ ಗುತ್ತಿಗೆದಾರರು ಎಂದು ಗೊತ್ತಿಲ್ಲ. ಆದರೆ ಮರ ಕಟಾವು ಮಾಡುವಾಗ ಅರಣ್ಯ ಅಧಿಕಾರಿಗಳು ಇರುತ್ತಿದ್ದರು ಎಂದು ನುಡಿಯುತ್ತಾರೆ. ಅರಣ್ಯ ಗುತ್ತಿಗೆದಾರರಾದರೆ ಆ ಬಗ್ಗೆ ಅರಣ್ಯ ಇಲಾಖೆಯಲ್ಲಿ ನೊಂದಣಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಪ್ಯಾನ್ ಇಲ್ಲ ಎಂದು ನುಡಿಯುತ್ತಾರೆ.

21. ಅಪಘಾತದ ನಂತರ ನನಗೆ 4 ದಿನ ಜ್ಞಾನ ಇರಲಿಲ್ಲ. ನನ್ನನ್ನು ಕರೆದುಕೊಂಡು ಹೋದವರು ಹೇಳಿದ ಪ್ರಕಾರ ಮೊದಲಿಗೆ ಅಂಕೋಲಾ ಸರಕಾರಿ ಆಸ್ಪತ್ರೆಗೆ, ನಂತರ ಕಾರವಾರದ ಸಿವಿಲ್ ಆಸ್ಪತ್ರೆಗೆ ಹಾಗೂ ಅಲ್ಲಿಂದ ಮಂಗಳೂರಿಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ಮಂಗಳೂರಿನಲ್ಲಿ 14 ದಿವಸ ಒಳರೋಗಿಯಾಗಿ ಇದ್ದೆ. ನನಗೆ ಆಪರೇಷನ ಮಾಡಿದ್ದಾರೆ. ಸಾಕ್ಷಿ ಸ್ವತಃ ತಲೆಗೆ ಆಪರೇಷನ್ ಮಾಡಿದ್ದಾರೆ ಹಾಗೂ ಕಾಲಿಗೆ ರಾಡ್ ಹಾಕಿದ್ದಾರೆ ಹಾಗೂ ದವಡೆಗೆ ಮತ್ತು ಪ್ಲಾಸ್ಟಿಕ್ ಸರ್ಜರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಿನಾಂಕ 01-02-2020 ರಂದು ಡಿಸ್ಚಾರ್ಜ ಆದ ನಂತರ 5 ಬಾರಿ ಚಿಕಿತ್ಸೆಗೆ ಪುನಃ ಹೋಗಿದ್ದೆ. ಸಾಕ್ಷಿ ಇನ್ನು ಪುನಃ ಚಿಕಿತ್ಸೆಗೆ ಹೋಗಲು ಇದೆ ಎಂದು ನುಡಿಯುತ್ತಾರೆ. ನಾನು ಕೊನೆಯ ಬಾರಿ ಚಿಕಿತ್ಸೆಗೆ ಹೋಗಿರುವುದು ದಿನಾಂಕ 17-12-2020 ಎಂದರೆ ಸಾಕ್ಷಿ

ಇರಬಹುದು, ದಾಖಲೆ ಇದೆ ಎಂದು ನುಡಿಯುತ್ತಾರೆ. ತೇಜಸ್ವಿನಿ ಆಸ್ಪತ್ರೆ, ಕದ್ರಿ, ಮಂಗಳೂರು ಅತ್ಯಾಧುನಿಕ ಉಪಕರಣಗಳುಳ್ಳ ಸುಸಜ್ಜಿತ ಆಸ್ಪತ್ರೆ ಎಂದರೆ ಸರಿ. ನಾನು ಪಾಲೋಪ್ ಟ್ರೀಟ್ಮೆಂಟಗೆ ಹೋದಾಗ ಪರೀಕ್ಷೆ ಮಾಡಿ ಔಷಧಿಗಳನ್ನು ಕೊಟ್ಟು ಆ ಬಗ್ಗೆ ಅವರ ಕೇಸ್ ಶೀಟ್‌ನಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿ. ನಾನು ಆ ರೀತಿ ಹೋದಾಗಲೆಲ್ಲ ತಪಾಸಣೆ ಮಾಡಿ ಅವರ ಕೇಸ್ ಶೀಟ್‌ನಲ್ಲಿ ನಮೂದಿಸಿದ್ದಾರೆ ಎಂದರೆ ಸರಿ. ಆ ರೀತಿ ನಮೂದಿಸಿರುವುದನ್ನು ಡಿಸ್‌ಚಾರ್ಜ್ ಸಮರಿ ಜೊತೆ ಹಾಕರು ಪಡಿಸಿದ್ದೇನೆ ಎಂದರೆ ಸರಿ. ದಿನಾಂಕ 17-12-2020 ರಂದು ಕೊನೆಯದಾಗಿ ಪಾಲೊಪ್ ಟ್ರಿಟಮೆಂಟ್‌ಗೆ ಹೋಗಿರುವುದು ಎಂದರೆ ಸಾಕ್ಷಿ ನಾನು ಹೋಗಿರುವ ಬಗ್ಗೆ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದೇನೆ ಹಾಗೂ ಅದರಲ್ಲಿ 2021 ರಂದು ಇದೆ ಎಂದು ನುಡಿಯುತ್ತಾರೆ. 2021 ರಲ್ಲಿ ಪೊಲೋಪ್ ಟ್ರಿಟ್‌ಮೆಂಟ್‌ಗೆ ಹೋದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿಯಲ್ಲ.

22. ಟ್ಯಾಕ್ಸಿ ಬಿಲ್ ಗಳಿಗೆ ಅದರ ಮಾಲೀಕರಾದ ಮೋಹನ್ ಶಂಕರ ನಾಯ್ಕ ರವರು ಸಹಿ ಮಾಡಿಕೊಟ್ಟಿರುತ್ತಾರೆ. ಅವರು ಪ್ರತಿಸಾರಿ ನಾನು ಹೋಗಿ ಬಂದ ಮಾರನೆ ದಿವಸ ಬಿಲ್ ಕೊಟ್ಟಿರುತ್ತಾರೆ. ನಾನು ಹಾಜರುಪಡಿಸಿದ ಬಿಲ್‌ನಲ್ಲಿ ಪ್ರಯಾಣಿಸಿದ ಕಿ ಮೀ ಮತ್ತು ಪ್ರತಿ ಕಿ ಮೀ ಗೆ ಎಷ್ಟು ದರ ಎಂದು ನಮೂದು ಇಲ್ಲ ಎಂದರೆ ಸರಿ. ಆ ಟ್ಯಾಕ್ಸಿ ಯಾರ ಮಾಲಿಕತ್ವದ್ದು ಎಂದು ಆ ಬಿಲ್‌ನಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿ ಅದರಲ್ಲಿ ಅವರು ಬರೆದಿಲ್ಲವಿರಬಹುದು ಎಂದು ನುಡಿಯುತ್ತಾರೆ. ನಾನು ಆ ವಾಹನದ ಮಾಲಿಕರಲ್ಲಿ ವಾಹನದ ಆರ್.ಸಿ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಬೇಕು ಎಂದು ಕೇಳಿಲ್ಲ. ಡಿಸ್‌ಚಾರ್ಜ್ ಬಿಲ್‌ನ್ನು ಸಾಕ್ಷಿಗೆ ತೋರಿಸಿ ಸಹಿ ಇದೇಯಾ ಎಂದು ಕೇಳಿದಾಗ ಇಲ್ಲ ಎಂದು

ನುಡಿಯುತ್ತಾರೆ. ಡಿಸ್‌ಚಾರ್ಜ್ ಬಿಲ್‌ನಲ್ಲಿ ಹೇಳಿರುವ ಮೊತ್ತವನ್ನು ತುಂಬಿರುವ ಬಗ್ಗೆ ಪಾವತಿ ಬಿಲ್ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಎಲ್ಲಾ ಅದರಲ್ಲಿ ಇದೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿದ ಬಿಲ್ ಗಳಲ್ಲಿ ಮುಂಗಡ ಪಾವತಿಸಿರುವ ಬಿಲ್‌ಗಳನ್ನು ಕೂಡ ಹಾಜರು ಪಡಿಸಿದ್ದೇನೆ ಎಂದರೆ ಸರಿ.

23. ನಿ.ಪಿ.8 ರಲ್ಲಿರುವ ದಿನಾಂಕ 20-01-2020 ರ 5 ಬಿಲ್ ಗಳಲ್ಲಿ ಹಾಗೂ ದಿನಾಂಕ 22-01-2020 ಮತ್ತು ದಿನಾಂಕ 23-01-2020 ರ ತಲಾ ಒಂದು ಬಿಲ್‌ಗಳಲ್ಲಿ ಹಾಗೂ ದಿನಾಂಕ 25-01-2020, ದಿನಾಂಕ 29-01-2020 ಹಾಗೂ ದಿನಾಂಕ 30-01-2020 ರ ಬಿಲ್‌ಗಳಲ್ಲಿ ಹಾಗೂ ದಿನಾಂಕ 01-02-2020 ರ ಎರಡು ಬಿಲ್‌ಗಳಲ್ಲಿ , ದಿನಾಂಕ 02-03-2020 ರ 1 ಬಿಲ್‌ನಲ್ಲಿ ಹಾಗೂ ದಿನಾಂಕ 10-08-2021 ರ ಒಂದು ಬಿಲ್‌ನಲ್ಲಿ ಸಹಿ ಇಲ್ಲ ಎಂದರೆ ಸರಿಯಲ್ಲ.

24. ಟ್ಯಾಕ್ಸಿ ಬಿಲ್‌ಗಳನ್ನು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿಸಿ ಹಾಜರು ಪಡಿಸಿರುವುದು ಎಂದರೆ ಸರಿಯಲ್ಲ. ನನ್ನ ಪ್ರಕಾರ ನಾನು ಔಷಧಿ ಉಪಚಾರದ ಬಾಪ್ತು ಎಲ್ಲಾ ಬಿಲ್‌ಗಳನ್ನು ಹಾಜರು ಪಡಿಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ರೂ.2,02,804/- ನನಗೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಕೊನೆಯ ಬಾರಿಗೆ ನಾನು ಯಾವ ದಿನಾಂಕದಂದು ಹೋಗಿದ್ದೆ ಎಂದು ಹೇಳಲು ಆಗುವುದಿಲ್ಲ. ನಾನು 7-8 ತಿಂಗಳ ಹಿಂದೆ ಹೋಗಿರಬಹುದು ಎಂದು ನುಡಿಯುತ್ತಾರೆ. ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಯಾವ ದಿನಾಂಕದಂದು ಪಡೆದುಕೊಂಡೆ ಎಂದು ನನಗೆ ಗೊತ್ತಿಲ್ಲ . ಆದರೆ ಬೇಕು ಎಂದು ಕೇಳಿದಾಗ ಕೊಟ್ಟಿರುತ್ತಾರೆ. ಆ ಸರ್ಟಿಫಿಕೇಟನ್ನು ಯಾವ ಆಧಾರದಲ್ಲಿ ತಯಾರು ಮಾಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಅಂಗನ್ಯೂನ್ಯತೆ

ಎಂ ವಿ ಸಿ ನಂ.53/2021

ಪಿ.ಡಬ್ಲ್ಯೂ: 1

ಸರ್ಟಿಫಿಕೇಟ ನೀಡುವ ಮುಂಚೆ ನನಗೆ ಸ್ಕ್ಯಾನ್ ಮಾಡಿ ಕೊಟ್ಟಿರುತ್ತಾರೆ. ಆ ಸರ್ಟಿಫಿಕೇಟ ತರಲು ಹೋಗಿ 10 ತಿಂಗಳು ಆಗಿರಬಹುದು. ಸಾಕ್ಷಿ ಸ್ವತಃ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

(ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟೆ ಸವಾಲನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.